ಇದ್ದಕ್ಕಿಂದಂತೆ ಕರೆಂಟು ಹೊರಟು ಹೋಯಿತು. ಅದು ಸರಿಯಾಗಿ ಸಂಜೆ ಮಗ್‌ರಿಬ್ ನಮಾಜಿನ ಹೊತ್ತಿನಲ್ಲಿ. ರಂಜಾನ್ ತಿಂಗಳ ಮೊದಲ ದಿನ. ಇನ್ನೇನು ಮಸೀದಿಯಿಂದ ಅಝಾನ್ ಕೇಳಿಸಬೇಕು ಅನ್ನುವ ಹೊತ್ತಿಗೆ. ಗಂಡ ಇಬ್ಬರು ಮಕ್ಕಳು ಶಾಹೀನ್, ಶಹಿದಾ ತಟ್ಟೆಯ ಮುಂದೆ ಕುಳಿತಿದ್ದರು. ನಿಂಬೆಹಣ್ಣಿನ ಶರಬತ್ತು, ಜತೆಗೆ ಕಲ್ಲಂಗಡಿ ಹಣ್ಣಿನ ಜ್ಯೂಸ್. ಇದ್ದಕ್ಕಿದ್ದಂತೆ ಕರೆಂಟು ಹೊರಟು ಹೋದಾಗ ಆಯಿಷಾ ಬೇಸರಗೊಂಡು, 'ಥತ್, ಈ ಕರೆಂಟಿಗೆ ಹೊತ್ತು ಗೊತ್ತು ಇಲ್ಲ. ಸರಿಯಾದ ಸಮಯಕ್ಕೆ ಕೈ ಕೊಡುತ್ತೆ' ಎಂದು ಗೊಣಗುತ್ತಾ, ಒಳಬಂದು ಎಮರ್ಜೆನ್ಸಿ ಲೈಟ್ ಅದುಮಿದರೆ ಅದು ಛಾರ್ಜ್ ಇಲ್ಲದೇ ಬೆಳಕು ಕೊಡುವ ಸ್ಥಿತಿಯಲ್ಲಿರಲಿಲ್ಲ. ಮತ್ತೊಮ್ಮೆ ಗೊಣಗಿಕೊಂಡು ಒಳಬಂದವಳಿಗೆ ಯಾವಾಗಲೋ ತಂದಿರಿಸಿದ ಮೇಣದ ಬತ್ತಿಯ ನೆನಪಾಯಿತು. ಕಷ್ಟ ಕಾಲಕ್ಕೆ ಬೆಳಕು ನೀಡುವ ಮೋಂಬತ್ತಿಯನ್ನು ಹುಡುಕಿ ಅದಕ್ಕೆ ಕಡ್ಡಿಗೀರಿ ಬೆಳಕು ನೀಡತೊಡಗಿದ ಮೋಂಬತ್ತಿಯನ್ನು ಗಂಡ ಮಕ್ಕಳಿರುವೆಡೆ ತಂದಿರಿಸಿದಳು.

ಅದೇ ವೇಳೆಗೆ ಮಗ್‌ರಿಬ್ ನಮಾಜಿನ ಅಝಾನ್ ಕೇಳಿಸಿತು. ಬೆಳಗ್ಗಿನಿಂದ ಹಸಿದಿದ್ದ ಮಕ್ಕಳಿಬ್ಬರು ಅದನ್ನೇ ಕಾದು ಕುಳಿತಿದ್ದವರಂತೆ, ಶರಬತ್ತು, ಕಲ್ಲಂಗಡಿ ಜ್ಯೂಸ್, ಸಮೋಸ ತಿಂದು ಎದೆ ನೀವಿಕೊಂಡು, 'ಅಬ್ಬಾ, ನೋಂಬು ರಾಡಿಯುವುದೆಂದರೆ ಎಷ್ಟು ಕಷ್ಟ. ನಾಳೆಯಿಂದ ನನ್ನಿಂದಾಗಲ್ಲಪ್ಪ' ಎಂದು ಆರು ವರ್ಷದ ಶಹಿದಾ ಅಂದಾಗ ಎಂಟರ ಹುಡುಗ ಶಾಹಿನ್ ಅವಳ ತಲೆಗೆ ಮೊಟಕಿ, 'ಹೆಣ್ಣಾಗಿ ನೀನು ಹೀಗೆ ಹೇಳಬಹುದೇ. ಮೊದಲು ಕಷ್ಟವಾಗುತ್ತೆ. ದಿನಕಳೆದಂತೆ ಏನೂ ಆಗೊಲ್ಲ. ರಮ್‌ಝಾನ್ ತಿಂಗಳ ಮೂವತ್ತು ನೋಂಬು ಆಚರಿಸಿದರೆ ಆ ಅಲ್ಲಾಹು ನಮಗೆ ರಹಮತ್, ಬರಕತ್ ಕೊಡ್ತಾನೆ' ಎಂದು ಆಚೆ ಕರೆದೊಯ್ದ.

ಅವರು ಹೋದ ಕಡೆ ನೋಡಿ ಹುಸೇನ ಹೆಂಡತಿ ಆಯಿಷಾಳೊಡನೆ ಹೇಳಿದ. 'ಮಕ್ಕಳಿಗೆ ನಿನ್ನ ಬುದ್ಧಿನೇ ಬಂದಿದೆ. ಇಷ್ಟು ಸಣ್ಣ ವಯಸ್ಸಿನಲ್ಲೇ ನೋಂಬು, ನಮಾಜು ಎಂದರೆ ಎಷ್ಟು ಶ್ರದ್ಧೆ. ಆ ಅಲ್ಲಾಹು ಅವರನ್ನು ಚೆನ್ನಾಗಿಟ್ಟಿರಲಿ' ಎಂದವ 'ನಾನು ಮಸೀದಿಗೆ ಹೋಗಿ ಬರುತ್ತೇನೆ' ಎಂದು ಹತ್ತಿರದಲ್ಲೇ ಮಸೀದಿಯ ಕಡೆ ಹೆಜ್ಜೆ ಹಾಕಿದ.

ಇನ್ನೂ ಕರೆಂಟು ಬಂದಿರಲಿಲ್ಲ. ಆಯಿಷಾ ಅಲ್ಲಿದ್ದ ಪ್ಲೇಟ್ ಲೋಟವನ್ನು ಒಳಗಿರಿಸಿ ವಝೂ ಮಾಡಿ ಬಂದು ನಮಾಜಿಗೆ ನಿಂತಳು. ನಮಾಜು ಮುಗಿಸಿ ಅಲ್ಲೇ ನಮಾಜಿನ ಚಾಪೆಯಲ್ಲಿ ಕುಳಿತು ಕೈಯೆತ್ತಿ ದೇವರಲ್ಲಿ ಬೇಡಿಕೊಳ್ಳ ತೊಡಗಿದಳು. 'ಯಾ ಅಲ್ಲಾಹುಮೆ, ಈ ಭೂಮಿಯ ಮೇಲೆ ನೀನು ನಮ್ಮನ್ನೆಲ್ಲಾ ಯಾವ ಕಾರಣಕ್ಕಾಗಿ ಹುಟ್ಟಿಸುತ್ತೀಯೋ ಗೊತ್ತಿಲ್ಲ. ಆದರೆ ಮನುಷ್ಯರನ್ನಾಗಿ ನಮ್ಮನ್ನು ಹುಟ್ಟಿಸಿ ನಮಗೆ ಬದುಕಲು ಎಲ್ಲವನ್ನೂ ಕೊಡುತ್ತೀ. ಈ ಜಗತ್ತಿನಲ್ಲಿರುವ ಎಲ್ಲರ ಹುಟ್ಟಿಗೆ ನೀನೇ ಕಾರಣಕರ್ತ ತಾನೇ. ಆದರೆ ನಾವೆಲ್ಲಾ ಯಾಕೆ ಪರಸ್ಪರ ದ್ವೇಷ, ಹಿಂಸೆ, ಅಸೂಯೆ, ಯುದ್ಧ, ಕೊಲೆ ಇಂತಹಾ ಕೆಟ್ಟದ್ದನ್ನೇ ಮಾಡುತ್ತೇವೆ. ಕೆಲವರು ಉತ್ತಮರಿರುತ್ತಾರೆ. ಇನ್ನು ಹಲವರು ದುಷ್ಟರಿರುತ್ತಾರೆ. ಜನ ಯಾಕೆ ಹೀಗೇ. ಶಾಂತಿ, ಸಹನೆ, ಪ್ರೀತಿ, ಮಮತೆ, ಔದಾರ್ಯ ಇಂತಹದನ್ನೆಲ್ಲಾ ಎಲ್ಲರ ಮನಸ್ಸಲ್ಲೂ ಯಾಕೆ ತುಂಬುತ್ತಿಲ್ಲ. ಕೆಲವರಿಗೆ ಶ್ರೀಮಂತಿಕೆ ಸುಖ. ಇನ್ನು ಕೆಲವರಿಗೆ ಬಡತನ ಕಷ್ಟ, ಯಾಕೆ ಹೀಗೆ? ನಾನು ಈ ನಮಾಜಿನ ಚಾಪೆಯಲ್ಲಿ ಕುಳಿತು ನಿನ್ನಲ್ಲಿ ಬೇಡಿ ಕೊಳ್ಳುತ್ತಿದ್ದೇನೆ. ಅಲ್ಲಾಹುವೇ, ಎಲ್ಲರಲ್ಲೂ ಪ್ರೀತಿಯನ್ನು, ವಾತ್ಸಲ್ಯವನ್ನು, ಮಮತೆಯನ್ನು ತುಂಬು. ಶಾಂತಿ, ಸೌಹಾರ್ದತೆಯನ್ನು ತುಂಬು, ಯಾವುದೇ ರೋಗ, ರುಜಿನ, ಕಷ್ಟ ಬರದಂತೆ ನಮ್ಮನ್ನೆಲ್ಲಾ ಕಾಪಾಡು ಅಲ್ಲಾರುವೇ ಎಂದು ಬೇಡಿಕೊಂಡು ನಮಾಜಿನ ಚಾಪೆಯಿಂದ ಈಚೆ ಬಂದಳು.

ಕರೆಂಟು ಬಂದಿರಲಿಲ್ಲ. ಮೇಣದ ಬತ್ತಿ ಅರ್ಧ ಉರಿದು ಖಾಲಿಯಾಗಿತ್ತು. ಅವಳು ಉರಿಯುತ್ತಿರುವ ಆ ಮೇಣದ ಬತ್ತಿಯನ್ನೇ ನೋಡಿದಳು. ತನ್ನನ್ನೇ ಬೆಂಕಿಯಿಂದ ಕರಗಿಸಿಕೊಂಡು ಇನ್ನೊಬ್ಬರಿಗೆ ಬೆಳಕು ನೀಡುವ ಈ ಮೋಂಬತ್ತಿಯದು ಎಂತಹಾ ಸಾರ್ಥಕ ಬದುಕು. ತಾನು ಇರುವಷ್ಟು ಹೊತ್ತು ಕೊನೆಯ ಹನಿ ಕರಗುವವರೆಗೂ ಇನ್ನೊಬ್ಬರಿಗೆ ಬೆಳಕು ನೀಡುತ್ತಲೇ ಇರುತ್ತದೆ. ಅಂತಹಾ ಬದುಕು ನಮ್ಮದಾಗುವುದಾಗಿದ್ದರೆ, ಪ್ರತಿಯೊಬ್ಬರ ಬದುಕು ಈ ಮೇಣದ ಬತ್ತಿಯಂತೆ ಇನ್ನೊಬ್ಬರಿಗೆ ಸಹಕಾರಿಯಾಗುವುದಾದರೆ ಈ ಜಗತ್ತು ಎಷ್ಟು ಸುಂದರವಾಗಿರುತ್ತಿತ್ತು.

* * *

ಆಯಿಷಾ ಹುಸೇನನನ್ನು ಮದುವೆಯಾದದ್ದು ಹತ್ತು ವರುಷಗಳ ಹಿಂದೆ. ತಾಯಿ, ತಂದೆಯೊಂದಿಗೆ ಬೀಡಿ ಕಟ್ಟಿಕೊಂಡು ಜೀವನ ನಡೆಸುತ್ತಿದ್ದ ಆಯಿಷಾಳ ಬೆನ್ನ ಹಿಂದೆ ಹುಟ್ಟಿದವರು ಏಳು ಮಂದಿ. ಅವರಲ್ಲಿ ಮೂರು ಮಂದಿ ಹೆಣ್ಣು, ನಾಲ್ಕು ಮಂದಿ ಗಂಡು. ಒಟ್ಟು ಎಂಟು ಮಕ್ಕಳಲ್ಲಿ ಆಯಿಷಾ ದೊಡ್ಡವಳು. ಹುಸೇನ ಆ ಊರಿಗೆ ಮೀನು ಮಾರಲು ಬರುತ್ತಿದ್ದ. ಆಯಿಷಾಳನ್ನು ನೋಡಿ ಹುಸೇನನಿಗೆ ಪ್ರೇಮಾಂಕುರವಾಗಿತ್ತು. ದಿನಾ ಅವಳ ಬುಟ್ಟಿಗೆ ಒಂದೆರಡು ಬಂಗುಡೆ, ಬೂತಾಯಿಗಳನ್ನು ಹೆಚ್ಚಾಗಿ ಹಾಕುತ್ತಿದ್ದ ಹುಸೇನ ಒಂದು ದಿನ ಧೈರ್ಯ ಮಾಡಿ ಅವಳಲ್ಲಿ ಕೇಳಿದ್ದ,

'ನೀನು ನನ್ನ ಮದುವೆಯಾಗುತ್ತೀಯಾ?'

'ಅಪ್ಪನ ಬಳಿ ಕೇಳಿ!' ಅವಳು ತಟಕ್ಕನೆ ಹೇಳಿ ಮುಖ ಕೆಂಪು ಕೆಂಪಾಗಿಸಿ ಕೊಂಡು ಓಡಿ ಹೋಗಿದ್ದಳು. ಹುಡುಗಿಗೆ ಒಪ್ಪಿಗೆ ಎಂದರಿತ ಹುಸೇನ ಒಂದು ದಿನ ತನ್ನ ತಾಯಿಯನ್ನು ಆ ಮನೆಗೆ ಕರೆತಂದು ಅವಳ ತಂದೆ–ತಾಯಿಯೊಡನೆ ಮಾತಾಡಲು ಹೇಳಿದ್ದ. ಹಾಗೇ ನೋಡಿದರೆ ಹುಸೇನ ಸ್ಫುರದ್ರೂಪಿ ಹುಡುಗನೇ. ಕಷ್ಟ ಪಟ್ಟು ಬೆಳಿಗ್ಗೆಯಿಂದ ಸಂಜೆಯವರೆಗೂ ದುಡಿಯುತ್ತಿದ್ದ. ಬೀಡಿ ಸೇದುವ ಚಟವನ್ನೊಂದು ಬಿಟ್ಟರೆ ಯಾವುದೇ ಕೆಟ್ಟ ಅಭ್ಯಾಸವಿರಲಿಲ್ಲ. ಯಾರಲ್ಲೂ ಹಗೆತನ ಇಟ್ಟುಕೊಂಡಿರಲಿಲ್ಲ. ಆದರೆ ಮಸೀದಿಗೆ ಹೋಗುವುದು, ನೋಂಬು ಅನುಷ್ಠಾನ ಗೊಳಿಸುವುದರಲ್ಲಿ ತುಂಬಾ ಹಿಂದುಳಿದಿದ್ದ. ಮದರಸಕ್ಕೆ ಒಂದೆರಡು ವರ್ಷ ಹೋಗಿದ್ದ ಮಾತ್ರ. ಶಾಲೆಗೂ ಅಷ್ಟೇ. ನಾಲ್ಕರ ತನಕ ಹೋದವ ಮತ್ತೆ ಶಾಲೆಗೆ ಹೋಗಿರಲಿಲ್ಲ. ಆದರೆ ಇದೆಲ್ಲದರ ನಡುವೆಯೂ ಅವನು ಪೋಲಿ–ಪೋಲಿ ಬುದ್ಧಿ ಬೆಳೆಸಿಕೊಂಡಿರಲಿಲ್ಲ. ಕಷ್ಟಪಟ್ಟು ದುಡಿಯಬೇಕು. ಒಂದಷ್ಟು ಸಂಪಾದಿಸಬೇಕು. ಒಂದು ಒಳ್ಳೆಯ ಹೆಣ್ಣನ್ನು ನೋಡಿ ಮದುವೆಯಾಗಬೇಕು ಎಂಬುವುದು ಅವನ ಹಂಬಲವಾಗಿತ್ತು. ಹಾಗೇ ಪ್ರತಿನಿತ್ಯವೂ ಮೀನು ಕೊಳ್ಳಲು ಬರುತ್ತಿರುವ ಆಯಿಷಾಳನ್ನು ನೋಡಿ ಅವನಿಗೆ ಮೆಚ್ಚಿಗೆಯಾಗಿತ್ತು. ಅವನ ಒಳ್ಳೆಯ ಗುಣ ನಡತೆಯನ್ನು ನೋಡಿ ಮದುವೆಯಾದರೆ ಇವಳನ್ನೇ ಮದುವೆಯಾಗಬೇಕು ಎಂದು ನಿಶ್ಚಯಿಸಿ, ಅವಳಿಂದ ಒಪ್ಪಿಗೆ ಪಡೆದು ಒಂದು ದಿನ ತಾಯಿಯನ್ನು ಆ ಮನೆಗೆ ಕಳುಹಿಸಿ ಕೊಟ್ಟಿದ್ದ. ಅವನ ತಾಯಿ ಹೋಗಿ ಮಾತಾಡಿದಾಗ ಆಯಿಷಾಳ ತಂದೆ, ತಾಯಿ ಮಾತಾಡಿದಾಗ ಅವರು ತಕ್ಷಣ ಒಪ್ಪಿಕೊಂಡಿದ್ದರು. ಅವರು ಪ್ರತಿನಿತ್ಯವೂ ಹುಸೇನನನ್ನು ನೋಡುತ್ತಿದ್ದರು. ಹಲವಷ್ಟು ವರ್ಷಗಳ ಕಾಲ ಅದೇ ಊರಿಗೆ ಮೀನು ತರುತ್ತಿದ್ದವನು, ಸ್ಫುರದ್ರೂಪಿ, ಒಳ್ಳೆಯ ಸಂಭಾವಿತ. ಉತ್ತಮ ಗುಣ ನಡತೆಯ ಹುಡುಗ ಎಂಬುವುದು ಅವರಿಗೆ ಅರಿವಾಗಿತ್ತು. ಇಂತಹ ಒಳ್ಳೆಯ ಹುಡುಗ ಆಯಿಷಾಳನ್ನು ಮದುವೆಯಾದರೆ ಅವಳು ಸುಖವಾಗಿರುವಳೆಂಬ ಕಾರಣಕ್ಕೆ ಅವರು ತಕ್ಷಣ ಒಪ್ಪಿಕೊಂಡಿದ್ದರು.

ಹಾಗೇ ಆಯಿಷಾ ಹುಸೇನನನ್ನು ಮದುವೆಯಾಗಿ ಅವನ ಮನೆಯನ್ನು, ಅವನ ಮನಸ್ಸನ್ನೂ ತುಂಬಿಕೊಂಡಳು. ಹುಸೇನನ ಪ್ರೀತಿ, ಅತ್ತೆಯ ಕಾಳಜಿಯಿಂದ ಅವಳ ಮನಸ್ಸು ತುಂಬಿ ಹೋಗಿತ್ತು. ಆದರೆ ಅವಳಿಗೆ ಇದ್ದ ಬೇಸರವೆಂದರೆ ಅವನು ಬೀಡಿ ಸೇದುತ್ತಿರುವುದು ಮತ್ತು ನಮಾಜು ಮಾಡದೇ ಇರುವುದು. ರಾತ್ರಿ ಮಲಗುವ ಸಮಯದಲ್ಲಿ ಅವನು ಬೀಡಿ ಸೇದುತ್ತಿರುವುದರಿಂದ ಅದರ ವಾಸನೆಯಿಂದ ಹಿಂಸೆಯಾಗುತ್ತಿತ್ತು. ಅಲ್ಲದೇ ಬೀಡಿ ಸೇದುವುದು ಆರೋಗ್ಯಕ್ಕೆ ಹಾನಿಕಾರಕ ಎಂದು ಅವನಿಗೆ ಮನವರಿಕೆ ಮಾಡಲು ಹಲವು ದಿನ ಹೆಣಗಿ ಕೊನೆಗೆ ಅದರಲ್ಲಿ ಜಯಶೀಲಳಾದಳು. ಧೂಮಪಾನದಿಂದ ಹುಟ್ಟುವ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ ಎಂದು ತಿಳಿ ಹೇಳಿ ಅವನು ಧೂಮಪಾನ ಮಾಡುವುದರಿಂದ ವಿಮುಖವನ್ನಾಗಿಸಿದಳು. ಹಾಗೇ ನಮಾಜ ಮತ್ತು ನೋಂಬ ಅನುಷ್ಠಾನಗೊಳಿಸುವುದರ ಮಹತ್ವವನ್ನೂ ತಿಳಿಸಿದಳು. ಸಮಾಜ ಮಾಡುವುದರಿಂದ ಮಾನಸಿಕ ನೆಮ್ಮದಿ ದೊರೆಯುವುದರ ಜೊತೆಗೆ ಹೃದಯದಲ್ಲಿ ಒಂದು ರೀತಿಯ ಶಾಂತಿ ನೆಲೆಸುತ್ತದೆ, ಹಾಗೇ ನೊಂಬನ್ನು ಅನುಷ್ಠಾನ ಗೊಳಿಸುವುದರಿಂದ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂಬುವುದನ್ನೆಲ್ಲಾ ಸವಿಸ್ತಾರವಾಗಿ ಹೇಳಿ ಅವನನ್ನು ಇನ್ನಷ್ಟು ಒಳ್ಳೆಯ ದಾರಿಗೆ ತಂದಿದ್ದಳು. ಹುಸೇನ ಹೆಂಡತಿಯ